JANUARY 11, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಯಶಸ್ವಿ ಮಾದರಿ ಶಾಲೆಯಾಗಿ, ರಾಷ್ಟ್ರದ ಗಮನ ಸೆಳೆದ, ಚಿಕ್ಕಮಗಳೂರು ಜಿಲ್ಲೆ, ಹಂಗರವಳ್ಳಿಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.**
- **ಪ್ರಧಾನಮಂತ್ರಿ, ಕಿರು ಆಹಾರ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ: ದೇಸಿ ಎಣ್ಣೆ ಉತ್ಪಾದನೆಗೆ, ಧನ ಸಹಾಯ.**
- **ಬೇಡ್ತಿ, ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯಿಂದ, ಉತ್ತರಕನ್ನಡ ಜಿಲ್ಲೆ, ಶಿರಸಿಯಲ್ಲಿ ಇಂದು, ಜನ ಸಮಾವೇಶ.**
- **ಇಂದು, ರಾಷ್ಟ್ರೀಯ, ಮಾನವ ಕಳ್ಳಸಾಗಣೆ ವಿರೋಧಿ, ಜಾಗೃತಿ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಚಿಕ್ಕಮಗಳೂರು ಜಿಲ್ಲೆ, ಹಂಗರವಳ್ಳಿ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಶಸ್ವಿ ಮಾದರಿ ಶಾಲೆಯಾಗಿ, ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದೆ. ಹೊಸ ದಿಲ್ಲಿಯ, ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆ, 'ಯಶಸ್ವಿ ಶಾಲಾ ನಾಯಕತ್ವ, ರಾಷ್ಟ್ರೀಯ ಸಮಾವೇಶ'ಕ್ಕಾಗಿ, ಈ ಶಾಲೆಯನ್ನು ಆಯ್ಕೆ ಮಾಡಿದೆ.**

<><><>

**ಈ ತಿಂಗಳ 17 ರಿಂದ 19ನೇ ತಾರೀಖಿನ ವರೆಗೆ, ಹೊಸ ದಿಲ್ಲಿಯಲ್ಲಿ ಆಯೋಜಿತ ಸಮಾವೇಶದಲ್ಲಿ, ಶಾಲೆಯ ಯಶೋಗಾಥೆ ಬಗ್ಗೆ, ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ.**

<><><>

**ಶಾಲೆಯ ಪ್ರಧಾನ ಗುರುಮಾತೆ ರಾಜೇಶ್ವರಿ ಹಂಗರವಳ್ಳಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.**

<><><>

ಪ್ರಧಾನ ಗುರುಮಾತೆ ರಾಜೇಶ್ವರಿ ಧ್ವನಿ 42 ಸೆಕೆಂದುಗಳು

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಳೆ ಕಲಬುರಗಿಗೆ ಭೇಟಿ ನೀಡಲಿದ್ದಾರೆ. ಸಾವಿರದ ಐನೂರ ತೊಂಬತ್ತೈದು ಕೋಟಿ 91 ಲಕ್ಷ ರೂಪಾಯಿ ವೆಚ್ಚದ, 467 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ ಕಲಬುರಗಿಯಲ್ಲಿ ಮಾಹಿತಿ ನೀಡಿ, ಮುಖ್ಯಮಂತ್ರಿಯವರು, ಜಿಲ್ಲೆಯ ಜೇವರ್ಗಿ ಹಾಗೂ ಸೇಡಂ ಮತಕ್ಷೇತ್ರದ, ಯಡ್ರಾಮಿ ಹಾಗೂ ಸೇಡಂ ಪಟ್ಟಣಗಳಲ್ಲಿ, 467 ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ, ಎಂದರು.

<><><>

ಬಜೆಟ್ ಪ್ರಸ್ತಾವಗಳು ಕೇವಲ ತಾತ್ಕಾಲಿಕ ಅಗತ್ಯಗಳಿಗೆ ಸೀಮಿತವಾಗದೆ, ಭವಿ ್ಯದ ದೃಷ್ಟಿಕೋನ ಹೊಂದಿರುವ, ದೀರ್ಘಕಾಲೀನ ಲಾಭ ನೀಡುವ, ಯೋಜನೆಗಳಾಗಿರಬೇಕು ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ತುಮಕೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, 2026 – 27ನೇ ಸಾಲಿನ ಆಯವ್ಯಯಕ್ಕೆ ಸಂಬಂಧಿಸಿ, ತುಮಕೂರು ಸೇಬು, ಹುಣಸೆ ಹಣ್ಣು ಸೇರಿದಂತೆ, ವಿವಿಧ ಹಣ್ಣುಗಳ ಗುಣಮಟ್ಟ ಕಾಪಾಡಿ, ಮೌಲ್ಯವರ್ಧಿಸಿ, ಮಾರಾಟಕ್ಕೆ ಅಣಿಗೊಳಿಸಲು, ಶೀತಲೀಕೃತ ಸಂಗ್ರಹಾಗಾರ ಸ್ಥಾಪನೆಗೆ, ಪ್ರಸ್ತಾವ ಸಿದ್ಧ ಪಡಿಸುವಂತೆ, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರಿಗೆ, ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದರು.

<><><>

ಮೈಸೂರು ಜಿಲ್ಲೆ, ಟಿ.ನರಸೀಪುರದ, ಶಿವಪಾರ್ವತಿ ನಗರದಲ್ಲಿ, ತಾತ್ಕಾಲಿಕ ಗುಡಿಸಲುಗಳಲ್ಲಿ ನೆಲೆಸಿರುವ, 40ಕ್ಕೂ ಹೆಚ್ಚು ಅಲೆಮಾರಿ ಕೊರಚ ಸಮುದಾಯದ ಕುಟುಂಬಗಳಿಗೆ, ಈ ತಿಂಗಳ 26 ನೇ ತಾರೀಖಿನ ಒಳಗಾಗಿ, ತ್ವರಿತವಾಗಿ ಹಕ್ಕು ಪತ್ರ ವಿತರಿಸಲು, ರಾಜ್ಯ ಪರಿಶಿ ್ಟ ಜಾತಿ ಮತ್ತು ಪಂಗಡಗಳ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ, ಜಿ.ಪಲ್ಲವಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳಿಗೆ, ಸೂಚಿಸಿದ್ದಾರೆ.

<><><>

"ಗಾಣದ ಎಣ್ಣೆಗಳು, ಸ್ಥಳೀಯ ಆಹಾರ ಸಂಸ್ಕೃತಿಗೆ ಪೂರಕವಾಗಿದ್ದು, ಅವುಗಳ ಬಳಕೆಯಿಂದ, ರೈತರ ಜೀವನ ಮಟ್ಟ ಸುಧಾರಿಸುತ್ತದೆ, ಸ್ಥಳೀಯರಿಗೆ ಉದ್ಯೋಗ ಲಭಿಸುತ್ತದೆ. ನಾಗರಿಕರ ಆರೋಗ್ಯವೂ ಸುಧಾರಿಸುತ್ತದೆ" ಎಂದು, ಶ್ರೀ ಮಂಟೇಸ್ವಾಮಿ ಮಠ ಮತ್ತು ಶ್ರೀ ಕಪ್ಪಡಿ ಕ್ಷೇತ್ರದ ಮಠಾಧಿಪತಿ, ಶ್ರೀಕಂಠ ಸಿದ್ಧಲಿಂಗ ರಾಜೇ ಅರಸ್ ತಿಳಿಸಿದ್ದಾರೆ. ಸಹಜ ಸಮೃದ್ಧ ಮತ್ತು ದೇಸಿರಿ ನ್ಯಾಚುರಲ್ಸ್ ಆಶ್ರಯದಲ್ಲಿ, ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ ಆಯೋಜಿತ, ಮೂರು ದಿನಗಳ 'ದೇಸಿ ಎಣ್ಣೆ ಮೇಳ' ದಲ್ಲಿ, ಎತ್ತಿನ ಗಾಣಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

ಮೈಸೂರಿನ, ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ, ನಿರ್ದೇಶಕ, ಗಿರಿಧರ ಪರ್ವತಂ ಮಾತನಾಡಿ, "ಇತ್ತೀಚಿನ ದಿನಗಳಲ್ಲಿ ಗಾಣದ ಎಣ್ಣೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದಾಗ್ಯೂ, ದೇಶಿ ಮಾರುಕಟ್ಟೆ ಬೇಡಿಕೆಯ, ಶೇಕಡ 45 ರ ್ಟ ಖಾದ್ಯ ತೈಲ ಮಾತ್ರ, ಉತ್ಪಾದನೆಯಾಗುತ್ತಿದೆ. 16 ದಶಾಂಶ 5 ಮಿಲಿಯನ್ ಟನ್ ಖಾದ್ಯ ತೈಲ, ಹೊರದೇಶಗಳಿಂದ ಆಮದಾಗುತ್ತಿದೆ ಎಂದರು. ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ, ಕಿರು ಆಹಾರ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ, ಪಿ.ಎಂ,

ಎಫ್.ಎಂ.ಇ. ಅಡಿ, ರೈತ ಉತ್ಪಾದಕರ ಸಂಸ್ಥೆ ಎಫ್.ಪಿ.ಓ.ಗಳು, ಕೃಷಿಕ ಮಹಿಳಾ ಸ್ವ ಸಹಾಯ ಸಂಘಗಳು, ಅನುದಾನ ಪಡೆದು, ಸ್ಥಳೀಯವಾಗಿ ಎಣ್ಣೆ ಉತ್ಪಾದನೆ ಮಾಡಿ, ಲಾಭಗಳಿಸಬಹುದು" ಎಂದರು.

<><><>

ಇಂದು ಸಂಜೆ ಸಮಾರೋಪಗೊಳ್ಳಲಿರುವ, ದೇಸಿ ಎಣ್ಣೆ ಮೇಳದಲ್ಲಿ, ಸಾಂಪ್ರದಾಯಿಕವಾಗಿ ಬಳಕೆಯಲ್ಲಿದ್ದ, 50 ಬಗೆಯ ಎಣ್ಣೆಗಳ ಪ್ರದರ್ಶನ ಮತ್ತು ಮಾಹಿತಿ ನೀಡಲಾಗುತ್ತಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉತ್ತರಕನ್ನಡ ಜಿಲ್ಲೆ, ಶಿರಸಿಯ, ಬೇಡ್ತಿ, ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ, ಎಂ.ಇ.ಎಸ್. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಮೈದಾನದಲ್ಲಿ, ಇಂದು ಮಧ್ಯಾಹ್ನ 2 ಗಂಟೆಗೆ, ಜನ ಸಮಾವೇಶ ಆಯೋಜಿಸಿದೆ. ಬೇಡ್ತಿ–ವರದಾ ಮತ್ತು ಅಘನಾಶಿನಿ–ವೇದಾವತಿ ನದಿಗಳ ಜೋಡಣೆ, ಪ್ರಸ್ತಾಪಿತ, ಯೋಜನೆಗಳನ್ನು ಕೈಬಿಡುವಂತೆ ಒತ್ತಾಯಿಸಿ, ಸಹಸ್ರಾರು ಜನ ಪಾಲ್ಗೊಳ್ಳಲಿದ್ದಾರೆ.

<><><>

ವಿಶ್ರಾಂತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ ಹಾಗೂ ಖ್ಯಾತ ಪರಿಸರ ಅರ್ಥಶಾಸ್ತ್ರಜ್ಞ, ಶಿವಮೊಗ್ಗದ ಪ್ರೊಫೆಸರ್ ಬಿ.ಎಂ.ಕುಮಾರಸ್ವಾಮಿ, ತಜ್ಞ ಉಪನ್ಯಾಸಕರಾಗಿ ಪಾಲ್ಗೊಳ್ಳಲಿದ್ದಾರೆ. ಸಚಿವ ಮಂಕಾಳ ವೈದ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಆರ್.ವಿ.ದೇಶಪಾಂಡೆ ಸೇರಿದಂತೆ, ಪರಿಸರ ಕಾರ್ಯಕರ್ತರಾದ ವಿ.ಎನ್.ಹೆಗಡೆ ಬೊಮ್ಮನಳ್ಳಿ ಹಾಗೂ ಅನಂತ ಹೆಗಡೆ ಅಶಿಸರ ಪಾಲ್ಗೊಳ್ಳಲಿದ್ದಾರೆ.

<><><>

ಆರು ಪೂಜ್ಯ ಪೀಠಾಧಿಪತಿಗಳ ಸಾನಿಧ್ಯದಲ್ಲಿ, ಜನ ಸಮಾವೇಶ ಜರುಗಲಿದ್ದು, ಪ್ರದೇಶ ಸಮಾಚಾರಕ್ಕಾಗಿ, ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಗೌರವ ಅಧ್ಯಕ್ಷರು ಹಾಗೂ ಸೋಂದಾ ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನದ, ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಧ್ವನಿ 46 ಸೆಕೆಂದುಗಳು

<><><>

'ಮಲಯಾಳಂ ಭಾ ಾ ಮಸೂದೆಯಿಂದ, ಗಡಿನಾಡ ಕನ್ನಡಿಗರಿಗೆ, ಅನ್ಯಾಯವಾಗಿದೆ; ಕೂಡಲೇ ಕೇರಳ ಸರ್ಕಾರ, ಮಸೂದೆಯನ್ನು ಹಿಂಪಡೆಯಬೇಕು ಎಂದು, ರಾಜ್ಯ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಸೋಮಣ್ಣ ಬೇವಿನಮರದ

ಆಗ್ರಹಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಶೇಕಡ 75 ರಿಂದ 80ರಷ್ಟು ಕನ್ನಡಿಗರಿರುವ, ಕಾಸರಗೋಡನ್ನು ಹೊರತುಪಡಿಸಿ, ಮಸೂದೆ ಜಾರಿಗೆ ತಮ್ಮ ವಿರೋಧವಿಲ್ಲ. ಕೇರಳ ಸರ್ಕಾರದ ನಿರ್ಧಾರದಿಂದ, ಗಡಿ ಭಾಗದ ಕನ್ನಡ ಶಾಲೆಗಳಿಗೆ ಹಾಗೂ ಕನ್ನಡಿಗರಿಗೆ ಅನ್ಯಾಯವಾಗಲಿದೆ ಎಂದರು.

<><><>

ವಿಕಸಿತ ಭಾರತ; ಗ್ಯಾರಂಟಿ ಫಾರ್ ರೋಜ್ ಗಾರ್ ಆಂಡ್ ಆಜೀವಿಕಾ ಮಿಷನ್ –ಗ್ರಾಮೀಣ, ವಿ.ಬಿ. ಜಿ ರಾಮ್ ಜಿ, ಯೋಜನೆಯನ್ನು ಕೇಂದ್ರ ಸರ್ಕಾರ, ಹಲವು ಮಹತ್ವದ ಬದಲಾವಣೆ ಹಾಗೂ ಪ್ರಯೋಜನಗಳನ್ನು ಸೇರಿಸಿ, ಮರು ರೂಪಿಸಿದೆ ಎಂದು, ಉತ್ತರಕನ್ನಡ ಸಂಸದ, ವಿಶ್ವೇಶ್ವರ ಹೆಗಡೆ ಕಾಗೇರಿ, ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ವಿನಾಕಾರಣ ಜಿ ರಾಮ್ ಜಿ ಯೋಜನೆ ಬಗ್ಗೆ, ಅಪಪ್ರಚಾರ ಮಾಡುತ್ತಿದೆ. ಅದನ್ನು ಬಯಲು ಮಾಡಲು, ಇದೇ 15 ರಿಂದ ಫೆಬ್ರುವರಿ 25ರ ವರೆಗೆ, ಬಿಜೆಪಿ ರಾಜ್ಯವ್ಯಾಪಿ ಜನ ಜಾಗೃತಿ ಅಭಿಯಾನ ಆಯೋಜಿಸಿದೆ ಎಂದರು.

<><><>

'ಸಂಪರ್ಕಗಳ ಬಲವರ್ಧನೆ; ಸುದೃಢ ಭವಿಷ್ಯಗಳು' ಧ್ಯೇಯದೊಂದಿಗೆ, ಇಂದು, ರಾಷ್ಟ್ರೀಯ, ಮಾನವ ಕಳ್ಳಸಾಗಣೆ ವಿರೋಧಿ, ಜಾಗೃತಿ ದಿನ ಆಚರಿಸಲಾಗುತ್ತಿದೆ. ಗುಲಾಮಗಿರಿ ಮತ್ತು ಮಾನವ ಕಳ್ಳಸಾಗಣೆ ಬಗ್ಗೆ, ಸಾರ್ವಜನಿಕರಲ್ಲಿ ಅರಿವು, ಕಳ್ಳ ಸಾಗಣೆಗೆ ಗುರಿಯಾಗಿ, ಬದುಕುಳಿದವರನ್ನು ರಕ್ಷಿಸಲು, ಮತ್ತು ಶೋಷಣೆಯನ್ನು ತಡೆಗಟ್ಟಲು, ಸಾಮೂಹಿಕ ಬದ್ಧತೆಯನ್ನು, ಈ ದಿನ ಪುನರುಚ್ಛರಿಸುತ್ತದೆ.

<><><>

ಭಾರತ ರತ್ನ, ಸ್ವತಂತ್ರ ಭಾರತದ ಎರಡನೇ ಪ್ರಧಾನಮಂತ್ರಿ, ಲಾಲ ಬಹಾದ್ದೂರ ಶಾಸ್ತ್ರಿ ಅವರ ಪುಣ್ಯ ತಿಥಿ ಇಂದು. 'ಜೈ ಜವಾನ್, ಜೈ ಕಿಸಾನ್' ಘೋಷಣೆ ಮೂಲಕ, ಜನಪ್ರಿಯ ಮುತ್ಸದ್ದಿಯಾದ ಶಾಸ್ತ್ರೀಜಿ, ಸ್ವಾತಂತ್ರ್ಯ ಸೇನಾನಿ. ಜನವರಿ 11, 1966 ರಲ್ಲಿ, ತಾಷ್ಕೆಂಟ್‌ನಲ್ಲಿ ನಿಧನರಾದ ಶಾಸ್ತ್ರೀಜಿ, ಜಾಗತಿಕವಾಗಿ 'ಶಾಂತಿ ದೂತ' ಎಂದೇ, ಗುರುತಿಸಲ್ಪಟ್ಟವರು.

<><><>

ಖೇಲೋ ಇಂಡಿಯಾ ಹಾಗೂ ಫಿಟ್ ಇಂಡಿಯಾ ಉಪಕ್ರಮಗಳಡಿ, 'ಧಾರವಾಡ ಸಂಸದರ, ಕ್ರೀಡಾ ಮಹೋತ್ಸವ 2026', ಈ ತಿಂಗಳ 16 ಮತ್ತು 17 ರಂದು, ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ, ಗರಗ – ಹಂಗರಕಿಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೈದಾನದಲ್ಲಿ, ಆಯೋಜಿತವಾಗಿದೆ. ಯುವಕ, ಯುವತಿಯರು, ಕ್ರೀಡಾಪಟುಗಳು, 14ನೇ ತಾರೀಖಿನೊಳಗೆ, ಹೆಸರು ನೋಂದಾಯಿಸಿ, ಕ್ರೀಡಾ ಮಹೋತ್ಸವದಲ್ಲಿ ಭಾಗವಹಿಸುವಂತೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ, ಕೋರಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಯಶಸ್ವಿ ಮಾದರಿ ಶಾಲೆಯಾಗಿ, ರಾಷ್ಟ್ರದ ಗಮನ ಸೆಳೆದ, ಚಿಕ್ಕಮಗಳೂರು ಜಿಲ್ಲೆ, ಹಂಗರವಳ್ಳಿಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.
- ಪ್ರಧಾನಮಂತ್ರಿ, ಕಿರು ಆಹಾರ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ; ದೇಸಿ ಎಣ್ಣೆ ಉತ್ಪಾದನೆಗೆ, ಧನ ಸಹಾಯ.

- ಬೇಡ್ತಿ, ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯಿಂದ, ಉತ್ತರಕನ್ನಡ ಜಿಲ್ಲೆ, ಶಿರಸಿಯಲ್ಲಿ ಇಂದು, ಜನ ಸಮಾವೇಶ.
- ಇಂದು, ರಾಷ್ಟ್ರೀಯ, ಮಾನವ ಕಳ್ಳಸಾಗಣೆ ವಿರೋಧಿ, ಜಾಗೃತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>